ಸಿ.ಸಿ .ನಂ.197/2023 ಪಿಡಬ್ಲೂಃ 1

ದಿನಾಂಕಃ 07-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಕುಮಾರಿ ಪಿ ಹೆಚ್ ಕೆ ವಕೀಲರಿಂದಃ**

5. ಯಾವುದೇ ಒಂದು ಸಾಲದ ಅರ್ಜಿ ಬಂದಾಗ ಅದನ್ನು ಪರಿಶೀಲನೆ ಮಾಡಿ ಆ ಸಾಲದ ಅರ್ಜಿಗೆ ನೋಟ್ ಹಾಕುತ್ತೇವೆ ಎಂದರೆ ಸಾಕ್ಷಿ ಪರಿಶೀಲನೆ ಮಾಡುತ್ತೇವೆ ಆದರೆ ನೋಟ್ ಹಾಕುವುದಿಲ್ಲ ಎಂದು ನುಡಿದಿರುತ್ತಾರೆ . ನೋಟ್ ಹಾಕುವುದಿಲ್ಲ ರೆಕಮೆಂಡೇಶನ್ ಹಾಕಿ ಕಳುಹಿಸುತ್ತೇವೆ . ಸಾಲದ ಅರ್ಜಿಯನ್ನು ನಾವು ಪರಿಶೀಲನೆ ಮಾಡಿ ಪ್ರಧಾನ ಕಚೇರಿಗೆ ಕಳುಹಿಸಿ ಕೊಡುತ್ತೇವೆ . ನಾವು ಹಾಜರು ಪಡಿಸಿದ ಸಾಲದ ಅರ್ಜಿಯಲ್ಲಿ ಅರ್ಜಿಯನ್ನು ಪರಿಶೀಲಿಸಿದ ಬಗ್ಗೆ ಸಹಿ ಇಲ್ಲ ಎಂದರೆ ಸರಿ . ಸಾಲದ ಅರ್ಜಿ ಕೊಡುವ ಸಂದರ್ಭದಲ್ಲಿ ಮೂರು ಜನ ಜಾಮೀನುದಾರರು ಇದ್ದರು . ಸಾಲದ ಅರ್ಜಿ ಮಂಜೂರಾದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲಗಾರರಿಗೆ ಹಣ ಸಂದಾಯ ಮಾಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಹಣವನ್ನು ಸಾಲಗಾರರ ಉಳಿತಾಯ ಖಾತೆಗೆ ಜಮಾ ಮಾಡಿರುತ್ತೇವೆ . ಅವರ ಉಳಿತಾಯ ಖಾತೆಗೆ ಹಣ ಜಮಾ ಮಾಡಿದ್ದೇವೆ ಎಂದು ತೋರಿಸಲು ಈವರೆಗೂ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ . ಈ ಪ್ರಕರಣದಲ್ಲಿ 10 ಸಾವಿರ ರೂಪಾಯಿ ಎಫ್ ಡಿ , ಐದು ಸಾವಿರ ರೂಪಾಯಿ ಷೇರು ಇಟ್ಟುಕೊಂಡಿದ್ದೇವೆ . ಎಫ್ ಡಿ ಹಾಗೂ ಷೇರು ಹಣದ ಬಗ್ಗೆ ಪ್ರಧಾನ ಕಚೇರಿಗೆ ಕಳುಹಿಸುವ ರೆಕಮೆಂಡೇಶನ್ ಲೇಟರನಲ್ಲಿ ಹೇಳಿರುತ್ತೇವೆ . ರೆಕಮೆಂಡೇಶನ್ ಲೇಟರ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಹಣ ಸಂದಾಯ ಮಾಡಿದ್ದೇವೆ ಎಂದು ಹೇಳಿದ ದಿನಾಂಕದಿಂದ ಈವರೆಗಿನ ಯಾವುದೇ ಸ್ಟೇಟಮೆಂಟ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಕ್ಷಿ ಹಾಜರು ಪಡಿಸಬಹುದು ಎಂದು ನುಡಿದಿರುತ್ತಾರೆ . ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಲು ತೊಂದರೆ ಇಲ್ಲ . ಸಾಲದ ಭದ್ರತೆಗಾಗಿ ಸಾಲಗಾರನಿಂದ ಸಾಲದ ಕರಾರು, ಮುದ್ದತ್ತು ವಚನ ಪತ್ರ, ಡಿಮಾಂಡ ಪ್ರಾಮಿಸರಿ ನೋಟ್ ಹಾಗೂ ಸ್ಯಾಲರಿ ಸ್ಲಿಪ್ ಪಡೆದುಕೊಂಡಿದ್ದೇವೆ . ಸಾಲಗಾರ ವೈಯಕ್ತಿಕ ಸಾಲವನ್ನು ಪಡೆದಿರುತ್ತಾರೆ . ಸಂಬಳದಾರರಿಗೆ ವೈಯಕ್ತಿಕ ಸಾಲವನ್ನು ನೀಡುತ್ತೇವೆ . ಎಫ್ ಡಿ ಗೆ 8 ಪರ್ಸೆಂಟ್ ಬಡ್ಡಿ ಇದೆ . ಹಾಗೂ ಷೇರನ್ನು ಡಿವಿಡೆಂಡ್ ನೊಂದಿಗೆ ಸಾಲಗಾರರ ಅಕೌಂಟಿಗೆ ಪ್ರತಿವರ್ಷ ಅವರ ಉಳಿತಾಯ ಖಾತೆಗೆ ಹಾಕುತ್ತೇವೆ . ಷೇರು ಇದೆ ಆದರೆ ಎಫ್ ಡಿ ಹಣವನ್ನು ಸಾಲದ ಹಣಕ್ಕೆ ಅಜ್ಜೆಸ್ಟ ಮಾಡಿದ್ದೆವೋ ಇಲ್ಲವೋ ದಾಖಲಾತಿ ನೋಡಿ ಹೇಳಬೇಕು. ಆರೋಪಿಯ ಎಸ್ ಬಿ ಸ್ಟೇಟಮೆಂಟ್ ಹಾಗೂ ಲೋನ್ ಸ್ಟೇಟಮೆಂಟ್ ನೋಡಿ ಹೇಳಬೇಕು. ಆ ದಾಖಲಾತಿಗಳನ್ನು ಮುಂದಿನ ಪಾಟೀ ಸವಾಲಿನಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.